# ನಾಟಕ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ

**ಹೊನ್ನಪ್ಪ ಹೆಚ್. ಕಡೇನಾಯ್ಕನಹಳ್ಳಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆಯ ಜಿ.ಜಿ.ಡಿ. ಕಲೆ, ಬಿ.ಎಂ.ಪಿ. ವಾಣಿಜ್ಯ ಮತ್ತು ಎಸ್.ವಿ.ಎಸ್. ವಿಜ್ಞಾನ ಪದವಿ ಮಹಾವಿದ್ಯಾಲಯ, ಬೈಲಹೊಂಗಲ, ಬೆಳಗಾವಿ.

DOI: https://doi.org/10.5281/zenodo.16677845

## ABSTRACT:

ಕನ್ನಡ ಸಾಹಿತ್ಯದಲ್ಲಿ ಮೂರು ಘಟ್ಟಗಳನ್ನು ನೋಡಬಹುದು. ಅವುಗಳೆಂದರೆ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ. ಈ ಹೊಸಗನ್ನಡ ಸಾಹಿತ್ಯದಲ್ಲಿ ಮತ್ತೆ ನಾಲ್ಕು ಘಟ್ಟಗಳನ್ನು ನಾವು ನೋಡಬಹುದು. ಅದರಲ್ಲಿ ನವೋದಯ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ನವ್ಯ ಸಾಹಿತ್ಯ ಮತ್ತು ದಲಿತ ಬಂಡಾಯ ಸಾಹಿತ್ಯ. ಈ ಎಲ್ಲ ಕಾಲಘಟ್ಟಗಳಲ್ಲಿ ಅನೇಕ ಮಹಾಕವಿಗಳು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃತಿಗಳನ್ನು ಕೊಟ್ಟು ಹೋಗಿದ್ದಾರೆ. ಅದರಲ್ಲಿ ನಾಟಕ ಸಾಹಿತ್ಯ ಪ್ರಕಾರವು ದೊಡ್ಡ ಮಟ್ಟದಲ್ಲಿ ಬೆಳವಣಿಗೆಯನ್ನು ಪಡೆದು ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ನಾಟಕ ಸಾಹಿತ್ಯ ಗದ್ಯ ಪ್ರಕಾರಕ್ಕೆ ಸೇರಿದ್ದು. ಹಾಗಾಗಿ ಇದು ಓದುಗರ ಮನಸ್ಸನ್ನು ಸೆಳೆಯುತ್ತದೆ. ದೊಡ್ಡ ದೊಡ್ಡ ಮಹಾನ್ ಕವಿಗಳು ಅನೇಕ ನಾಟಕಗಳನ್ನು ರಚಿಸಿದ್ದಾರೆ. ನವೋದಯ ಸಾಹಿತ್ಯದಲ್ಲಿ ನಾಟಕ ಸಾಹಿತ್ಯ ತನ್ನದೇ ಆದ ಮಹತ್ವವನ್ನು ಪಡೆದುಕೊಂಡು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. ನವೋದಯ ಸಾಹಿತ್ಯಕ್ಕೆ ಬಿಎಂಶ್ರೀ ಅವರು ನಾಂದಿ ಹಾಡಿದರು. ಮುಂದೆ ಕನ್ನಡದ ಶ್ರೇಷ್ಠ ಕವಿಗಳಾದ, ಪ್ರಥಮ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪು ಅವರು ಎಲ್ಲ ಪ್ರಕಾರದಲ್ಲಿ ಸಾಹಿತ್ಯವನ್ನು ರಚಿಸಿ ನಾಟಕ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಕುವೆಂಪು ಅವರ ನಾಟಕಗಳು ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಸೂಚಿಯನ್ನೇ ನೀಡಿತು. ಕುವೆಂಪು ಅವರು ನಾಟಕ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಅವರು ರಚಿಸಿದ ನಾಟಕಗಳ ಕುರಿತು ನಾವಿಲ್ಲಿ ನೋಡಬಹುದು.

## KEYWORDS:

ನಾಟಕ, ರಂಗಭೂಮಿ, ಬೆರಳ್‌ಗೆ ಕೊರಳ್, ಜಲಗಾರ, ರೈತ.

ಕನ್ನಡ ನಾಟಕ ಸಾಹಿತ್ಯವು ಸುಮಾರು ವರ್ಷಗಳ ಹಳೆಯದಾದ ಸಾಹಿತ್ಯವಾಗಿದೆ. ಕನ್ನಡ ಸಾಹಿತ್ಯದ ಪ್ರಮುಖ ನಾಟಕಕಾರರಾದ ಕುವೆಂಪುರವರು ರಂಗಭೂಮಿಗೆ ಹೊಸತನ್ನು ನೀಡಿದ ಕವಿಗಳು ಹಾಗೂ ಅವರ ಪ್ರಮುಖ ನಾಟಕಗಳು ರಂಗಭೂಮಿಯ ಮೇಲೆ ಪ್ರದರ್ಶನಗೊಂಡಿವೆ. ಸಹೃದಯರ ಮನಸ್ಸನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಸೂತ್ರಧಾರನ ಹಲವಾರು ಪಾತ್ರಗಳ ಮೂಲಕ ನಾಟಕವನ್ನು ಪ್ರದರ್ಶಿಸಿದರೆ ಅದು ದೃಶ್ಯ ಮಾಧ್ಯಮವಾಗಿ ನೋಡುಗರ ಭಾವನೆಗಳನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿವೆ. ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಇತ್ಯಾದಿ ನಾಟಕ ಪ್ರಕಾರಗಳು ರಂಗಭೂಮಿಯ ಮೇಲೆ ನಾಟಕದ ವಿವಿಧ ಪಾತ್ರಗಳ ಮೂಲಕ ಪ್ರದರ್ಶನವಾಗುತ್ತಿದ್ದರೆ, ನೋಡುಗರಿಗೆ ಕಣ್ಣು ಮುಂದೆಯೇ ಈ ಘಟನೆ, ವಿಷಯವಸ್ತು ನಡೆಯುತ್ತದೆ ಎಂದು ಭಾಸವಾಗುತ್ತದೆ. ಸಹೃದಯರು ನಗುವನ್ನು, ದುಃಖವನ್ನು, ಕರುಣವನ್ನು, ಭಯವನ್ನು, ಹಾಸ್ಯವನ್ನು ಇತ್ಯಾದಿ ದೃಶ್ಯ ಮಾಧ್ಯಮದ ಮೂಲಕ ಆಸ್ವಾದಿಸುತ್ತಾರೆ.

ಕನ್ನಡ ನಾಟಕ ಸಾಹಿತ್ಯಕ್ಕೆ ಕುವೆಂಪುರವರ ನಾಟಕ ಸಾಹಿತ್ಯವು ಹೊಸತನ್ನು ತಂದುಕೊಟ್ಟಿದೆ. ಕನ್ನಡ ನಾಡಿನ ಜನರ ಮನೆಮನಗಳನ್ನು ಸೂರೆಗೊಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಕುವೆಂಪುರವರ ಸಾಧನೆ ಉನ್ನತ ಶಿಖರವಾಗಿದೆ. ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅದರಲ್ಲೂ ನವೋದಯ ಸಾಹಿತ್ಯದ ಕಾಲಘಟ್ಟವನ್ನು ಸಮರ್ಥವಾಗಿ ಬೆಳೆಸಿಕೊಂಡರು. ರಾಷ್ಟ್ರಕವಿ ಕುವೆಂಪುರವರು ಕಾವ್ಯ, ನಾಟಕ, ಕಥೆ, ಕವನ, ಕಾದಂಬರಿ, ವಿಮರ್ಶೆ, ಮಹಾಕಾವ್ಯ, ಜೀವನ ಚರಿತ್ರೆ, ಅನುವಾದ, ಆತ್ಮಕಥೆ ಇತ್ಯಾದಿ ಸಾಹಿತ್ಯ ಪ್ರಕಾರಗಳು ನಿಸರ್ಗ ಪ್ರೇಮದಿಂದ, ಹೃದಯ ವೈಶಾಲ್ಯದಿಂದ ಒಡಮೂಡಿವೆ. ಕುವೆಂಪುರವರು ತಮ್ಮ ಕನ್ನಡ ನಾಡಿನ ಪದ ಸಂಪತ್ತನ್ನು ಬೆಳೆಸುತ್ತಾ ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಎತ್ತರಕ್ಕೆ ಕೊಂಡೊಯ್ದರು. ಕನ್ನಡ ನಾಡಿನ ನಿಸರ್ಗಪ್ರೇಮವನ್ನು, ಕಲೆ, ಸಂಸ್ಕೃತಿಯನ್ನು ತಮ್ಮ ಸಾಹಿತ್ಯದ ಮೂಲಕ ಶ್ರೀಮಂತಗೊಳಿಸಿದರು.

ಕನ್ನಡ ಭಾಷೆಯ ಮೊಟ್ಟಮೊದಲ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ, ಕನ್ನಡದ ಎರಡನೆಯ ರಾಷ್ಟ್ರಕವಿಯೆಂದು ಬಿರುದು ಪಡೆದ ಕುವೆಂಪುರವರು ಹಲವಾರು ನಾಟಕಗಳನ್ನು ರಚಿಸಿದ್ದಾರೆ. ತಮ್ಮ ನಾಟಕ ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಪ್ರಮುಖ ನಾಟಕಗಳು: ಸ್ಮಶಾನ ಕುರುಕ್ಷೇತ್ರಂ, ಬೆರಳ್‌ಗೆ ಕೊರಳ್, ಜಲಗಾರ, ಯಮನಸೋಲು, ಬಿರುಗಾಳಿ, ಬಲಿದಾನ, ಚಂದ್ರಹಾಸ, ಮಹಾರಾತ್ರಿ, ವಾಲ್ಮೀಕಿಯ ಭಾಗ್ಯ, ಶೂದ್ರ ತಪಸ್ವಿ, ರಕ್ತಾಕ್ಷಿ ಇತ್ಯಾದಿ ನಾಟಕಗಳನ್ನು ರಚಿಸಿ ಕನ್ನಡ ನಾಟಕವನ್ನು ಉನ್ನತೀಕರಿಸಿದ್ದಾರೆ. ಅಷ್ಟೇ ಅಲ್ಲದೆ ತಮ್ಮ ನಾಟಕದ ವಿಷಯ ವಸ್ತುವಿನ ಮೂಲಕ ಜಗತ್ತಿನ ಕಣ್ಣನ್ನು

ತೆರೆಸಿದ್ದಾರೆ.

ಕುವೆಂಪುರವರ ‘ಬೆರಳ್‌ಗೆ ಕೊರಳ್’ ನಾಟಕವು ವರ್ಗ ಸಂಘರ್ಷವನ್ನು ಬಿಂಬಿಸುವ ಒಂದು ಐತಿಹಾಸಿಕ ನಾಟಕವಾಗಿದೆ. ಜಾತಿ, ಧರ್ಮ, ಮೇಲು–ಕೀಳು ಎಂಬ ಅನಿಷ್ಟ ಪದ್ಧತಿಗಳನ್ನು ಬೇರು ಸಮೇತವಾಗಿ ಕಿತ್ತೆಸೆಯಲು ದೃಶ್ಯ ಮಾಧ್ಯಮವಾಗಿ ಹೊರಹೊಮ್ಮಿದ ನಾಟಕ ಸಾಹಿತ್ಯವಾಗಿದೆ. ಈ ನಾಟಕದಲ್ಲಿ ಗುರು, ಅಬ್ಬೆ, ಏಕಲವ್ಯ, ಅಶ್ವತ್ಥಾಮ, ದ್ರೋಣಾಚಾರ್ಯ, ಅರ್ಜುನ, ಕೌರವರು, ಪಾಂಡವರು ಇತ್ಯಾದಿ ಪಾತ್ರಗಳು ರಂಗಭೂಮಿಯ ಮೇಲೆ ಪ್ರದರ್ಶನವಾಗುತ್ತವೆ. ಮಹಾಭಾರತದ ಮಹಾಸಾಗರದಲ್ಲೊಂದು ಹನಿಯಾಗಿ ಸಾಗರದ ಕೋಲಾಹಲದ ನಡುವೆ ಸುಳಿದು ಮರೆಯಾಗುವ ಏಕಲವ್ಯನ ಪಾತ್ರದ ಸ್ಥಾನ ಇಲ್ಲಿಯ ದಾರ್ಶನಿಕ ರಂಗಭೂಮಿಯ ನಾಟಕವಾಗಿ ಪರಿಣಮಿಸಿದೆ. ಅಲ್ಲಿ ಇಂಗಿತವಾಗಿ ಅಪ್ರಕಟರೂಪದಲ್ಲಿರುವ ಶ್ರೇಷ್ಠವಾದದ್ದು ಇಲ್ಲಿ ಸುಪ್ರಕಟವಾಗಿ ತನ್ನ ಪರಿಣತಾವಸ್ಥೆಯಲ್ಲಿ ಗೋಚರವಾಗುತ್ತದೆ. “ಗುರುಶಿಷ್ಯ ಸಂಬಂಧವಾದ ತತ್ವ, ಕರ್ಮತತ್ವ ಮತ್ತು ಸಮರ್ಪಣ ರೂಪವಾದ ಯಜ್ಞತತ್ವಗಳು ಇಲ್ಲಿ ಪ್ರತಿಮಾ ವಿಧಾನದಿಂದ ಧ್ವನಿತವಾಗಿವೆ.”[1] ಏಕಲವ್ಯ ದ್ರೋಣರ ಮುಖಾಂತರ ಮೈದೋರಿದ್ದರೂ ಅವು ವ್ಯಕ್ತಿತ್ವಕ್ಕೆ ಕ್ರಮತಪ್ಪಿದ ನಡತೆಯಾಗಿ ನಿತ್ಯವಾದವು.

ಏಕಲವ್ಯ, ದ್ರೋಣಾಚಾರ್ಯರು ಪರಸ್ಪರ ಪೂರಕವಾದವರು. ಏಕಲವ್ಯ ವ್ಯಾಧನ ಮಗ. ದ್ರೋಣಾಚಾರ್ಯರ ಕೀರ್ತಿಯನ್ನು ಕೇಳಿ ಅವರಿಗೆ ಶಿಷ್ಯರಾಗಿ ಬಂದವರಲ್ಲಿ ಏಕಲವ್ಯನೂ ಒಬ್ಬ. ಆದರೆ ಏಕಲವ್ಯ ವ್ಯಾಧನ ಮಗ ಎಂಬ ಕಾರಣದಿಂದ ದ್ರೋಣಾಚಾರ್ಯರು ಏಕಲವ್ಯನನ್ನು ಶಿಷ್ಯನನ್ನಾಗಿ ಸ್ವೀಕರಿಸಲಿಲ್ಲ. ಆದರೆ ಏಕಲವ್ಯ ಅದರಿಂದ ನಿರಾಶನಾಗಲಿಲ್ಲ. ಕಾಡಿಗೆ ತೆರಳಿ ಮಣ್ಣಿನಿಂದ ದ್ರೋಣರ ಮೂರ್ತಿಯನ್ನು ನಿರ್ಮಿಸಿಕೊಂಡು ಆ ವಿಗ್ರಹದಲ್ಲಿ ದ್ರೋಣರ ಪ್ರತಿಬಿಂಬವನ್ನು ಕಂಡು ಅದಕ್ಕೆ ಗುರುಸೇವೆ ಸಲ್ಲಿಸಿ ಶಸ್ತ್ರಾಭ್ಯಾಸಕ್ಕೆ ತೊಡಗಿದನು. ಹಲವು ದಿನಗಳ ನಂತರ ಏಕಲವ್ಯನು ಬಿಲ್ಲು ವಿದ್ಯೆಯಲ್ಲಿ ಪರಿಣಿತನಾದನು.

ಏಕಲವ್ಯ ಇದ್ದ ಕಾಡಿಗೆ ಒಂದು ದಿನ ಕೌರವರೂ ಪಾಂಡವರೂ ಬೇಟೆಗಾಗಿ ಹೋದರು. ಒಬ್ಬ ಸೇವಕ ಒಂದು ಶ್ವಾನವನ್ನು ಹಿಡಿದುಕೊಂಡು ಅವರ ಹಿಂದೆ ಹೋದನು. ಆ ಶ್ವಾನವು ಏಕಲವ್ಯನನ್ನು ಕಂಡು ಕೂಗಿತು (ಬೊಗಳಿತು). ಅವನು ಆ ನಾಯಿಯ ಬಾಯೊಳಕ್ಕೆ ಏಳು ಬಾಣಗಳನ್ನು ಬಿಟ್ಟನು. ಆ ನಾಯಿ ಪಾಂಡವರ ಹತ್ತಿರ ಓಡಿಹೋಯಿತು. ಶ್ವಾನದ ಬಾಯಿಯೊಳಗೆ ಇದ್ದ ಬಾಣಗಳನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಅಂತಹ ಬಿಲ್ಲು ವಿದ್ಯೆಯಲ್ಲಿ ಪರಿಣಿತವಾದ ವ್ಯಕ್ತಿ ಯಾರಿರಬಹುದೆಂದು ಹುಡುಕುತ್ತಾ ಬಂದು ಏಕಲವ್ಯನನ್ನು ಕಂಡರು. ಅವರು

ಏಕಲವ್ಯನನ್ನು ಪ್ರಶ್ನಿಸಿ ಅವನು ನಿಷಾದ ರಾಜನಾದ ಹಿರಣ್ಯ ಧನುಷ್ಯನ ಮಗನೆಂದೂ ಹಾಗೂ ದ್ರೋಣಾಚಾರ್ಯರ ಶಿಷ್ಯನೆಂದೂ ಅರಿತರು. ಧನುರ್ವಿದ್ಯೆಯಲ್ಲಿ ತನ್ನನ್ನು ಮೀರಿಸಿದ ಬೇರೊಬ್ಬ ವ್ಯಕ್ತಿಯಿದ್ದಿದ್ದನ್ನು ನೋಡಿ ಅರ್ಜುನನು ವ್ಯಾಕುಲಭರಿತನಾದನು. ಊರಿಗೆ ಮರಳಿ ತಕ್ಷಣವೇ ರಹಸ್ಯವಾಗಿ ದ್ರೋಣರನ್ನು ಸಂದಿಸಿ, "ಗುರುವೇ, ಧನುರ್ವಿದ್ಯೆಯಲ್ಲಿ ನನ್ನನ್ನು ಬೇರೆ ಯಾವ ಶಿಷ್ಯನೂ ಮೀರಿಸಲಾರನು ಎಂದು ವಚನ ಕೊಟ್ಟಿದ್ದೀರಿ. ಆದರೆ ಕಾಡಿನಲ್ಲಿ ನಿಮ್ಮ ಶಿಷ್ಯ ಒಬ್ಬ ಇದ್ದಾನೆ. ಅವನು ವ್ಯಾಧ."[2] ದ್ರೋಣಾಚಾರ್ಯರು ಮರು ಮಾತಾಡದೆ ಅರ್ಜುನನನ್ನು ಕೂಡಿಕೊಂಡು ಕಾಡಿಗೆ ಹೋದರು. ಗುರುಗಳನ್ನು ಪ್ರತ್ಯಕ್ಷವಾಗಿ ಕಂಡೊಡನೆಯೇ ಏಕಲವ್ಯ ನಮಸ್ಕರಿಸಿ ಅವರ ನಾಮಸ್ಮರಣೆಯ ಮಹಿಮೆಯಿಂದಲೇ ತಾನು ಅಸ್ತ್ರವಿದ್ಯೆಯಲ್ಲಿ ಪಾರಂಗತನಾದೆನೆಂದು ಹೇಳಿಕೊಂಡನು. ಆಗ ದ್ರೋಣಾಚಾರ್ಯರು, "ನೀನು ನನ್ನ ಶಿಷ್ಯನಾದರೆ ಗುರುದಕ್ಷಿಣೆಯೇನು?" ಎಂದು ಕೇಳಿದರು. "ಗುರುವೇ, ನನ್ನದು ಎಂಬುದು ಯಾವುದು ಇಲ್ಲ. ಸಮಸ್ತವೂ ತಮ್ಮದೇ. ತಾವು ಏನು ಕೊಡಬೇಕೆಂದು ಆಜ್ಞಾಪಿಸುವಿರೋ ಅದನ್ನು ಗುರುದಕ್ಷಿಣೆಯಾಗಿ ಧಾರೆಯೆರೆಯುತ್ತೇನೆ" ಎಂದು ಏಕಲವ್ಯನು ಉತ್ತರಿಸಿದನು. ಆಗ ದ್ರೋಣರು "ನಿನ್ನ ಬಲಗೈಯ ಹೆಬ್ಬೆರಳನ್ನು ಕೊಡು" ಎಂದರು. ಆ ಕ್ಷಣ ಏಕಲವ್ಯನು ಹಿಂದು ಮುಂದು ಯೋಚಿಸದೆ, ದುಃಖಿಸದೆ ಕೂಡಲೇ ತನ್ನ ಹೆಬ್ಬೆರಳನ್ನು ಕತ್ತರಿಸಿಕೊಟ್ಟನು. ಇದರಿಂದ ಅರ್ಜುನನಿಗೆ ಸಂತೋಷವಾಗಿ ತನ್ನ ಮೋಸದಿಂದ ಗುರಿಯನ್ನು ಸಾಧಿಸಿದ; ದ್ರೋಣಾಚಾರ್ಯರು ವಿದ್ಯೆ ಕಲಿಸದೆ ಗುರುದಕ್ಷಿಣೆ ಪಡೆದು ಅರ್ಜುನನಿಗೆ ಕೊಟ್ಟ ಪ್ರಮಾಣವನ್ನು ಸಾಧಿಸಿದರು. ಇದು ಅಂದಿನ ಕಾಲದಿಂದ ಇಂದಿನ ಕಾಲದವರೆಗೆ ಪ್ರತಿಭಾವಂತರಿಗೆ ದೊರೆಯದ ಅಧಿಕಾರ, ಉದ್ಯೋಗ, ಉನ್ನತ ಸ್ಥಾನಮಾನಗಳು ಕಪಟ ಗುಣವುಳ್ಳವರಿಗೆ, ದುಷ್ಟರಿಗೆ, ಅಪ್ರತಿಭಾವಂತರಿಗೆ ದೊರೆಯುವುದು ಅಪ್ರಸ್ತುತವಾಗಿದೆ.

ಕುವೆಂಪುರವರ ಮತ್ತೊಂದು ಪ್ರಮುಖವಾದ ನಾಟಕವೆಂದರೆ ಅದೇ 'ಜಲಗಾರ' ನಾಟಕವಾಗಿದೆ. ಈ ನಾಟಕವು ಕೂಡ ಆಧುನಿಕ ಕನ್ನಡ ಸಾಹಿತ್ಯದ ಮೊದಲ ಶ್ರೇಷ್ಠ ಅವೈದಿಕ ಪ್ರತಿಭೆಯಾದ ಕುವೆಂಪು ತನ್ನ ಕಾಲದ ಸಾಂಸ್ಕೃತಿಕ ಯಜಮಾನಿಕೆಯ ವಿರುದ್ಧ, ಪುರೋಹಿತಶಾಹಿ ವ್ಯವಸ್ಥೆಯ ವಿರುದ್ಧ, ಪ್ರಧಾನ ಸಂಸ್ಕೃತಿಯು ಪ್ರತಿಪಾದಿಸುತ್ತಿದ್ದ ಮೂಲಗಳ ವಿರುದ್ಧ ಸೆಣಸಬೇಕಾಗಿತ್ತು. ವಿಭಿನ್ನವಾದ ಜಗತ್ತಿನಿಂದ ಬಂದ ಕುವೆಂಪುರವರು ಪ್ರಬಲವಾಗಿ ಬೇರೂರಿದ್ದ ಸಾಂಸ್ಥಿಕ ಶಕ್ತಿಯನ್ನು ಸೃಜನಶೀಲ ನೆಲೆಯಲ್ಲಿ ಸಮರ್ಥವಾಗಿ ಎದುರಿಸಿದರೆಂದೇ ಸಾಂಸ್ಕೃತಿಕವಾಗಿ ರಾಷ್ಟ್ರಕವಿ ಕುವೆಂಪುರವರಿಗೆ ಅತ್ಯಂತ ಉನ್ನತ ಸ್ಥಾನಮಾನವಿದೆ. ಜಲಗಾರ ನಾಟಕವು ರಚಿತವಾದದ್ದು 1928ರಲ್ಲಿ. ಅಂದಿನ ಕಾಲಘಟ್ಟದಲ್ಲಿ ಪುರೋಹಿತಶಾಹಿ, ಜಾತಿಪದ್ಧತಿ, ಬಡವ–ಬಲ್ಲಿದ ಎಂಬ ಭೇದಭಾವದ ಕಾಲಘಟ್ಟದಲ್ಲಿ ರಚಿತವಾದ ಹಾಗೂ

ಮುಖ್ಯವಾದ ನಾಟಕವೆಂದರೆ ಅದೇ ಜಲಗಾರ ನಾಟಕ.

ಕುವೆಂಪುರವರು ಜಲಗಾರ ನಾಟಕದಲ್ಲಿ ವಿಷಯ ವಸ್ತುವನ್ನು ಜನಸಾಮಾನ್ಯರಿಗೆ ಅಥವಾ ಸಹೃದಯರಿಗೆ ತಲುಪಿಸಲು ಸೂತ್ರಧಾರನಿಂದ ಹಲವಾರು ಪಾತ್ರಗಳನ್ನು ಸೃಷ್ಟಿ ಮಾಡಿದರು. ಭೂದೇವಿ, ಶಿವ, ಜಲಗಾರ, ರೈತ, ಕಬ್ಬಿಗ, ಯುವಕ, ತಿರುಕ, ಭಟ್ಟ, ಬಾಲಕರು, ಇಬ್ಬರು ಪಾರ್ವವರು, ಇಬ್ಬರು ತರುಣರು, ಇಬ್ಬರು ಹಳ್ಳಿಯ ಹುಡುಗಿಯರು ಇತ್ಯಾದಿ ಪಾತ್ರಗಳು ಮುಖ್ಯವಾಗಿವೆ. ಜಲಗಾರ ನಾಟಕ ಕುವೆಂಪುರವರ ವರ್ಣಾಶ್ರಮ ವಿರೋಧಿ ನೆಲೆ, ಪರಂಪರೆಯ ರೂಢಿಯ ನೆಲೆಯಲ್ಲಿನ ಜಲಗಾರನ ಮೂಲಕ ದೇಗುಲದ ಪರಿಕಲ್ಪನೆಯನ್ನು ನಿರಾಕರಿಸುವುದು, ಜಲಗಾರನು ಪೊರಕೆ, ಬುಟ್ಟಿಯೊಡನೆ ತನ್ನ ದಿನನಿತ್ಯದ ಕಾಯಕವನ್ನು ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆಯಿಂದ ಮಾಡುತ್ತಾನೆ. ರೈತ ಮತ್ತು ಜಲಗಾರನ ನಡುವಿನ ಸಂಭಾಷಣೆ, ಶಿವ ಮತ್ತು ಜಲಗಾರನ ಕಾಯಕದ ಸಂಭಾಷಣೆ, ಪುರೋಹಿತಶಾಹಿಯ ಜಾತಿ ಪದ್ಧತಿ, ಇವೆಲ್ಲವೂ 12ನೇ ಶತಮಾನದ ವಚನಕಾರರ ಪ್ರಭಾವ ಕುವೆಂಪುರವರ ಮೇಲೆ ಬೀರಿದೆ. ಹನ್ನೆರಡನೆಯ ಶತಮಾನದಲ್ಲಿ ಕಾಯಕದ ಮಹತ್ವ, ವರ್ಗ–ವರ್ಣ, ಜಾತಿಪದ್ಧತಿ, ಶ್ರೀಮಂತ–ಬಡವ ಈ ತಾರತಮ್ಯವನ್ನು ಹೋಗಲಾಡಿಸಲು ವಚನಕಾರರು ತಮ್ಮ ಬದುಕನ್ನೇ ಅರ್ಪಣೆ ಮಾಡಿದ್ದರು. ವಚನಕಾರರು ಕನ್ನಡ ಸಾಹಿತ್ಯವನ್ನು ತಮ್ಮ ತನು–ಮನದಿಂದ ಶ್ರೀಮಂತಗೊಳಿಸಿದರು.

ಕುವೆಂಪುರವರ 'ಶ್ಮಶಾನ ಕುರುಕ್ಷೇತ್ರಂ' ನಾಟಕ 1931ರಲ್ಲಿ ರಚಿತವಾದ ಅತ್ಯಂತ ವಿಶಿಷ್ಟವಾದ ಕೃತಿ ಇದಾಗಿದೆ. ಈ ನಾಟಕದ ವಸ್ತು ಮಹಾಭಾರತದ ಕೊನೆಯ ದಿನದ ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶನ, ಅವಿವೇಕ, ದುರ್ಲಂಘ್ಯ ವಿಧಿ, ಸರ್ವವಿಫಲತೆ, ಸಂಸ್ಕೃತಿಯ ಸಾವು ಇದಕ್ಕೆ ಪ್ರತಿಮೆ. ಒಂದೊಂದು ಯುದ್ಧವು ಪ್ರಾರಂಭವಾಗುವಾಗ ಅದು ಯುದ್ಧವನ್ನೇ ಕೊನೆಗಾಣಿಸುವ ಜಗತ್ತಿನ ಅನಿವಾರ್ಯತೆ ಎಂದು ಬಿಂಬಿಸುತ್ತವೆ. ಅನ್ಯಾಯವೆಲ್ಲ ನಾಶವಾಗಿ ನ್ಯಾಯ ಸ್ಥಾಪನೆಯಾಗುವುದೆಂದು ಭಾವಿಸುತ್ತವೆ. ಈ ನಾಟಕದಲ್ಲಿ ಹಲವಾರು ಪಾತ್ರಗಳ ಮೂಲಕ ಕುವೆಂಪುರವರು ನಾಟಕವನ್ನು ಪೂರ್ಣಗೊಳಿಸಿದ್ದಾರೆ. ಕೃಷ್ಣ, ರುದ್ರ, ಧರ್ಮಕಾಲ, ಭೀಮ, ಅರ್ಜುನ, ಸಹದೇವ, ಕುಂತಿ, ಧೃತರಾಷ್ಟ್ರ, ಗಾಂಧಾರಿ, ದ್ರೌಪದಿ, ಮಾತೆ, ಕಂದ, ಕೌರವ, ವಿಧುರ, ಸಂಜಯ, ಅಶ್ವತ್ಥಾಮ, ಬಾನುಮತಿ, ಗೀರ್ವಾಣ, ನೀಲಾಕ್ಷ, ಚಾಣೂರ, ಮುದುಕಿ, ಕಲಿ, ದ್ವಾಪರ, ಮರುಳುಗಳು, ಬಂಧುಗಳು, ಪರಿವಾರದವರು, ಸೈನಿಕರು, ಸಖಿಯರು ಇತ್ಯಾದಿ ಪಾತ್ರಗಳನ್ನು ಕುವೆಂಪುರವರ ನಾಟಕವು ರಂಗಭೂಮಿಯ ಮೇಲೆ ಪ್ರದರ್ಶನಗೊಂಡಾಗ ದೃಶ್ಯಮಾಧ್ಯಮ ಪ್ರತಿಯೊಬ್ಬ ಭಾರತೀಯ ಸಹೃದಯರನ್ನು ಸೂರೆಗೊಂಡಿವೆ.

ಹದಿನೆಂಟು ದಿನಗಳ ರಣ ಕೋಲಾಹಲದಿಂದ ತುಂಬಿ ತುಳುಕಿದ ಮಹಾಭಾರತ ಸಂಗ್ರಾಮವು ಸಂಪೂರ್ಣ ಕೊನೆಗೊಂಡ ದಿನದ ಉತ್ಸಾಹವಿಲ್ಲದ ರಾತ್ರಿಯ ಚಿತ್ರಣವಿದೆ. ಅದುವರೆಗೂ ರಣರಂಗವಾಗಿದ್ದ ಕುರುಕ್ಷೇತ್ರವು ಅಂದು ಭೀಷಣ ಶ್ಮಶಾನ ಮಾತ್ರವಾಗಿದೆ. ವಿಸ್ತಾರವಾಗಿರುವ ಆ ರಣಭೂಮಿಯ ಬಟ್ಟಬಯಲಿನಲ್ಲಿ ಕಗ್ಗತ್ತಲು ಕವಿದುಕೊಂಡಿದೆ. ಕೋಟ್ಯಾನುಕೋಟಿ ಯೋಧರ ಶವಗಳೂ, ಅಸಂಖ್ಯವಾದ ಆನೆ, ಕುದುರೆ, ತೇರುಗಳೂ ಮುದ್ದೆಮುದ್ದೆಯಾಗಿ ಅಸ್ತವ್ಯಸ್ತವಾಗಿ ಆ ಕರಾಳ ರಾತ್ರಿಯ ಬಿತ್ತರದ ಬಯಲಿನಲ್ಲಿ ತುಂಬಿ ಬಿದ್ದಿವೆ. ಸಾಯುವವರೂ, ಗಾಯಪಟ್ಟವರೂ ನರಳುತ್ತಿದ್ದಾರೆ. ಇರುಳಿನ ಗರ್ಭದಿಂದ ಹೊರಟ ಆ ರೋಧನ ಧ್ವನಿ ಕುರುಕ್ಷೇತ್ರವನ್ನೆಲ್ಲ ಆವರಿಸಿದೆ. ಭಾರತ ಯುದ್ಧದಲ್ಲಿ ಮಡಿದವರು ಬಂಧುಗಳು, ತಂದೆತಾಯಂದಿರು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಸತಿಯರು, ಮಕ್ಕಳು, ಮುದುಕರು, ಕೌರವ ಪಾಂಡವರು, ಅಂದು ಶ್ಮಶಾನದಲ್ಲಿ ಭೇದವಿಲ್ಲದೆ ತಮ್ಮ ಸಂಬಂಧಿಕರ ದೇಹಗಳನ್ನು ಹುಡುಕುತ್ತಿದ್ದಾರೆ. ಎತ್ತ ನೋಡಿದರೂ ದುಃಖಮಯವಾದ ರುದ್ರ ದೃಶ್ಯ. ಆ ದಿನ ಸಂಜೆಯ ಕಾಲ ಭೀಮ ದುರ್ಯೋಧನರ ಗದಾಯುದ್ಧವು ಪೂರೈಸಿದೆ. ಕೌರವೇಂದ್ರನು ತೊಡೆಮುರಿದು ವೈಶಂಪಾಯನ ಸರೋವರದ ತೀರದಲ್ಲಿ ನರಳುತ್ತಾ ಇನ್ನೂ ಜೀವದಿಂದಿದ್ದಾನೆ. ಅದೇ ರಾತ್ರಿ ದ್ವಾಪರಯುಗ ಮುಗಿದು ಕಲಿಯುಗ ಪ್ರಾರಂಭವಾಗುವುದು. ಹೀಗೆ ಎರಡು ಯುಗಗಳ ಸಂಧಿದಶೆಯನ್ನು ಕಾಣುತ್ತೇವೆ. ಶ್ಮಶಾನ ಕುರುಕ್ಷೇತ್ರಂ ನಾಟಕದಲ್ಲಿ ದ್ವಾಪರಯುಗದ ಅಂಚಿನಲ್ಲಿ ನಿಂತು ಕಲಿಯುಗವನ್ನು ನಮಗೆ ತೋರಿಸುವ ಕವಿ ಪ್ರತಿಭೆ, ಭೂತ ವರ್ತಮಾನಗಳನ್ನು ಹಿಡಿದಿಟ್ಟು ಭವಿಷ್ಯ ವಿಹಾರಿಯಾಗುತ್ತದೆ. ಇತಿಹಾಸವನ್ನು ಮಾತ್ರವಲ್ಲ ವಿಕಾಸವನ್ನೂ ಧ್ವನಿಸುತ್ತದೆ. ದರ್ಶನದ ಹರವು ಅನನ್ಯವೂ ಆಶ್ಚರ್ಯಕರವಾದದ್ದು.

ಕುವೆಂಪುರವರ ಬೆರಳ್‌ಗೆ ಕೊರಳ್, ಶ್ಮಶಾನ ಕುರುಕ್ಷೇತ್ರಂ ಈ ಎರಡು ನಾಟಕಗಳು ಮಹಾಭಾರತದ ವಸ್ತುವನ್ನು ಒಳಗೊಂಡಿವೆ. 'ಬೆರಳ್‌ಗೆ ಕೊರಳ್' ನಾಟಕ ಏಕಲವ್ಯನು ದ್ರೋಣಾಚಾರ್ಯರಿಗೆ ತನ್ನ ಬಲಗೈಯ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೊಡುವ ವಸ್ತುವನ್ನು ಕುರಿತದ್ದು. ಶ್ಮಶಾನ ಕುರುಕ್ಷೇತ್ರಂ ನಾಟಕವು ರಣರಂಗದ ಘೋರ ವರ್ಣನೆಯಿಂದ ನಾಟಕ ಪ್ರಾರಂಭವಾಗುತ್ತದೆ. ಹದಿನೆಂಟು ದಿನಗಳ ಹೋರಾಟದ ಕೋಲಾಹಲದಿಂದ ಕೂಡಿದ ಕುರುಕ್ಷೇತ್ರ, ಸಂಗ್ರಾಮದ ಕೊನೆಯ ರಾತ್ರಿ ಶ್ಮಶಾನ ಮಾತ್ರವಾಗಿ ಉಳಿದ ಘೋರ ವಿಷಣ್ಣ ಚಿತ್ರವನ್ನು ಕೊಡುವ ನಾಟಕವೇ ಶ್ಮಶಾನ ಕುರುಕ್ಷೇತ್ರಂ. ಜಲಗಾರ ನಾಟಕ ಕುವೆಂಪುರವರ ವರ್ಣಾಶ್ರಮ ವಿರೋಧಿ ನೆಲೆಯ ಮೊದಲ ಹಂತದ ನಾಟಕವಾಗಿದೆ. ಜಲಗಾರದಲ್ಲಿ ಬರುವ ರೈತ ಮತ್ತು ಭೂಮಿ, ಜಲಗಾರ ಮತ್ತು ಶಿವ, ಜಲಗಾರನ ಪ್ರಾಮಾಣಿಕತೆ ತನ್ನ ಕಾಯಕದಲ್ಲಿಯೇ ಶಿವನನ್ನು ಕಾಣುವ ಪರಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಹನ್ನೆರಡನೆಯ ಶತಮಾನದ

ಶಿವಶರಣರ ವಚನ ಸಾಹಿತ್ಯದ ಪ್ರಭಾವ ಜಲಗಾರ ನಾಟಕದಲ್ಲಿ ಒಡಲಾಳದಲ್ಲಿ ಒಡಮೂಡಿದೆ. ಹೀಗೆ ಕುವೆಂಪುರವರು ತಮ್ಮ ಕೃಷಿಯಿಂದ ನಾಟಕ ಪ್ರಕಾರದ ಸಾಹಿತ್ಯವನ್ನು ಉನ್ನತೀಕರಿಸಿದ್ದಾರೆ.

**ಕೊನೆ ಟಿಪ್ಪಣಿಗಳು:**

1. ಕುವೆಂಪು, (1947), ಬೆರಳ್‌ಗೆ ಕೊರಳ್, ಉದಯರವಿ ಪ್ರಕಾಶನ, ಉದಯರವಿ ಪ್ರಕಾಶನ, ಮೈಸೂರು, ಪು.ಸಂ. 50
2. ಅದೇ, ಪು.ಸಂ. 49

**ಪರಾಮರ್ಶನ ಗ್ರಂಥಗಳು:**


1. ಕುವೆಂಪು, (1928), ಜಲಗಾರ, ಉದಯರವಿ ಪ್ರಕಾಶನ, ಮೈಸೂರು.
2. ಕುವೆಂಪು, (1947), ಬೆರಳ್‌ಗೆ ಕೊರಳ್, ಉದಯರವಿ ಪ್ರಕಾಶನ, ಉದಯರವಿ ಪ್ರಕಾಶನ, ಮೈಸೂರು.
3. ಕುವೆಂಪು, (1931), ಶ್ಮಶಾನ ಕುರುಕ್ಷೇತ್ರಂ, ಉದಯರವಿ ಪ್ರಕಾಶನ, ಮೈಸೂರು.
4. ತಿಪ್ಪೇರುದ್ರಸ್ವಾಮಿ ಎಚ್., (1969), ಕುವೆಂಪು ಅವರ ನಾಟಕಗಳು, ಕಾವ್ಯಶ್ರೀ ಪ್ರಕಾಶನ, ಮೈಸೂರು.
5. ನರಹಳ್ಳಿ ಬಾಲಸುಬ್ರಹ್ಮಣ್ಯ, (2011), ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.